ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 21-01-1971 - 1.

*ಈಗಿಲ್ಲದಿದ್ದರೆ ಇನ್ನೆಂದಿಗೂ ಇಲ್ಲ* (अब नहीं तो कब नहीं)

ಇಂದು ಬಾಪ್ ದಾದಾ ಪ್ರತಿಯೊಂದು ಮಗುವಿನ ಮಸ್ತಕದಲ್ಲಿ ಏನನ್ನು ನೋಡುತ್ತಿದ್ದಾರೆ? ತಂದೆ ಮಕ್ಕಳನ್ನು ನೋಡುವಾಗ ಪ್ರತಿಯೊಂದು ಮಗು ಉನ್ನತೋನ್ನತ ಭಾಗ್ಯವನ್ನು ತಯಾರಿಸಿಕೂಳ್ಳಲಿ ಎಂಬ ಶುಭ ಭಾವನೆಯಿರುತ್ತದೆ. ವರ್ತಮಾನ ಸಮಯ ವರದಾತನ ರೂಪದಲ್ಲಿ ವರದಾನ ಕೊಡಲು ಬಂದಿದ್ದರೂ ಪ್ರತಿಯೊಂದು ಮಗುವೂ ಯಥಾಯೋಗ್ಯ ಯಥಾಶಕ್ತಿ ವರದಾತನಿಂದ ವರದಾನವನ್ನು ಪ್ರಾಪ್ತಿ ಮಾಡಿಕೊಳ್ಳುತ್ತಿದ್ದಾರೆ. ಈ ಸಮಯಕ್ಕೆ ಸರ್ವಾತ್ಮರಿಗೆ ವರದಾನ ಪಡೆಯುವ ವಿಶೇಷ ವರದಾನವಿದೆ "ಈಗಿಲ್ಲದಿದ್ದರೆ ಇನ್ನೆಂದಿಗೂ ಇಲ್ಲ". ಇಂದು ಈ ಆತ್ಮರಿಗೆ (ರಾಜ್ಯಪಾಲ ಮತ್ತು ಅವರ ಯುಗಲ್) ವರದಾನವನ್ನು ಪಡೆಯುವ ಶುಭ ದಿನ ಎಂದು ಹೇಳಬಹುದು. ಇಡೀ ಕಲ್ಪದಲ್ಲಿ ಈ ಅಲೌಕಿಕ ಮಿಲನ ಬಹಳ ಕಡಿಮೆ ಪದಮಾಪದಮ್ ಭಾಗ್ಯಶಾಲಿ ಆತ್ಮರಿಗಿರುತ್ತದೆ. ಸಂಪರ್ಕದ ನಂತರ ಸಂಬಂಧದಲ್ಲಿ ಬರುವುದು ಏಕೆಂದರೆ ಸಂಬಂಧದಿಂದಲೇ ಶ್ರೇಷ್ಠ ಪ್ರಾಪ್ತಿಯಾಗುತ್ತದೆ. ಎರಡು ಶಬ್ದ ಸದಾ ನೆನಪಿಡಿ ಸ್ವಯಂ ಮತ್ತು ಸಮಯ, ಸ್ವಯಂ ಮತ್ತು ಸಮಯವನ್ನು ಸದಾ ನೆನಪಿಟ್ಟುಕೊಂಡರೆ ಈ ಜೀವನದಲ್ಲಿ ಅನೇಕ ಜನ್ಮಗಳಿಗೆ ಶ್ರೇಷ್ಠ ಪ್ರಾಲಬ್ಧವನ್ನು ಪಡೆಯುವಿರಿ.

**ರಾಜ್ಯಪಾಲ ಮತ್ತು ಅವರ ಯುಗಲ್ ಜೊತೆಗೆ ಮಿಲನ.**

ತಮ್ಮ ನಿಜ ಮನೆಗೆ ಬಂದಿರುವಿರಿ ಎಂದು ಅನುಭವ ಮಾಡುತ್ತೀರಾ? ತಮ್ಮ ಮನೆಗೆ ಎಷ್ಟು ಬೇಗನೆ ಬರುವುದು ಎಂದು ಗೊತ್ತಿದೆಯೇ? ಕರ್ತವ್ಯ  ಪೂರ್ಣವಾಗುತ್ತಲೇ ಮನೆ ನೆನಪಿಗೆ ಬರುತ್ತದೆ. ಅದೇ ರೀತಿ ಈ ಶರೀರ ನಿರ್ವಹಣೆಯ ಕರ್ತವ್ಯ ಪೂರ್ಣವಾಗುತ್ತಲೇ ಮನೆ ನೆನಪಿಗೆ ಬರಬೇಕು. ಸಂಬಂಧವನ್ನು ಹೆಚ್ಚಿಸಿಕೊಳ್ಳಬೇಕು. ಒಂದು ಸಂಬಂಧವನ್ನು ಹೆಚ್ಚಿಸಿಕೊಳ್ಳುವದರಿಂದ ಎಂದರೆ ಈ ಸಂಬಂಧದ ಆವಶ್ಯಕತೆಯನ್ನು ತಿಳಿಯುವುದರಿಂದ ಅನೇಕ ಪ್ರಕಾರದ ಅವಶ್ಯಕತೆಗಳು ಪೂರ್ಣಗೊಳ್ಳುತ್ತವೆ. ಎಲ್ಲಾ ಅವಶ್ಯಕತೆಗಳನ್ನು ಪೂರ್ಣ ಮಾಡಲು ಒಂದು ಅವಶ್ಯಕತೆಯನ್ನು ತಿಳಿದುಕೊಳ್ಳಬೇಕು. ಶರೀರ ನಿರ್ವಹಣೆಗೆ ಅನೇಕ ಸಾಧನಗಳು ಆವಶ್ಯಕವೆಂದು ಹೇಗೆ ತಿಳಿಯುತ್ತೀರೋ, ಹಾಗೆಯೇ ಆತ್ಮಿಕ ಉನ್ನತಿಗೆ ಒಂದು ಸಾಧನ ಅವಶ್ಯಕವಾಗಿದೆ. ಆದ್ದರಿಂದ ಸದಾ ತಮ್ಮನ್ನು ಅಕಾಲಮೂರ್ತಿಯೆಂದು ತಿಳಿದರೆ ಅಕಾಲ ಮೃತ್ಯುವಿನಿಂದಲೂ, ಅಕಾಲದಿಂದಲೂ, ಸರ್ವ ಸಮಸ್ಯೆಗಳಿಂದಲೂ ಬಚಾವಾಗುವಿರಿ. ಮಾನಸಿಕ ಚಿಂತೆಗಳು, ಮಾನಸಿಕ ಪರಿಸ್ಥಿತಿಗಳನ್ನು ದೂರ ಮಾಡಲು ಒಂದೇ ಸಾಧನವನ್ನು ನೆನಪಿಡಿ - ಕೇವಲ ಈ ಹಳೆಯ ಶರೀರದ ಭಾವನೆಯನ್ನು ಅಳಿಸುವುದು. ಈ ದೇಹಾಭಿಮಾನವನ್ನು ಅಳಿಸಲು ಸರ್ವ ಪರಿಸ್ಥಿತಿಗಳು ಅಳಿಸಿಹೋಗುವವು. ಈಗ ಕೇಳಲು ಏನೂ ಉಳಿದಿಲ್ಲ. ಕೇವಲ ಸಂಬಂಧದಲ್ಲಿ ಬರುತ್ತಿರಬೇಕು. ಎಲ್ಲರನ್ನೂ ಮಿಲನ ಮಾಡಲು ಮತ್ತೆ ಬರುವೆವು. ಈಗ ಎಲ್ಲರಿಂದ ವಿದಾಯ.

ಅವ್ಯಕ್ತ ಮುರಳಿ 21-01-1971.

***ಈಗಿಲ್ಲದಿದ್ದರೆ ಇನ್ನೆಂದಿಗೂ ಇಲ್ಲ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪ್ರೇಮ ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

1. ನಾನು ವರದಾತನಿಂದ ವರದಾನಗಳನ್ನು ಪಡೆದಿದ್ದೇನೆ.

2. ನಾನು ವಿಶ್ವಾತ್ಮರನ್ನು ಪರಮಾತ್ಮನ ಸಂಬಂಧದಲ್ಲಿ ತರುವ ಪದಮಾ ಪದಂ ಭಾಗ್ಯಶಾಲಿ.

3. ನಾನು ಅನೇಕ ಜನ್ಮದ ಶ್ರೇಷ್ಠ ಪ್ರಾಲಬ್ಧವನ್ನು ಹೊಂದಲು ಸ್ವಯಂ ಮತ್ತು ಸಮಯದ ಮೇಲೆ ಅಟೆಂಶನ್ ಇಟ್ಟುಕೊಂಡಿದ್ದೇನೆ.

4. ನನ್ನ ಮನೆ ಪರಂಧಾಮ, ಈಗ ಮನೆಗೆ ಹಿಂತಿರುಗಿ ಹೋಗಬೇಕು.

5. ನನ್ನ ಉನ್ನತಿಗಾಗಿ ಸ್ವಯಂಅನ್ನು ಅಕಾಲಮೂರ್ತಿಯಾಗಿ ಭಾವಿಸಿ ಅಕಾಲ ಮೃತ್ಯುವಿನಿಂದ, ಅಕಾಲವಾಗಿ ಸಂಭವಿಸುವ ಸರ್ವ ಸಮಸ್ಯೆಗಳಿಂದ ಪಾರಾಗಿದ್ದೇನೆ.

6. ನಾನು ದೇಹಾಭಿಮಾನವನ್ನು ತೊಲಗಿಸಿ ಸರ್ವ ಪರಿಸ್ಥಿತಿಗಳನ್ನು ನಿವಾರಿಸಿಕೊಂಡಿದ್ದೇನೆ.